# ಹಿರಿಯ ನಾಗರಿಕರಿಗೆ – ಸಹಾಯ ಹಸ್ತ

**2013ನೇ ಸಾಲಿನ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಘೋಷಣೆ**

## “ಹಿರಿಯ ಶಕ್ತಿ” ಅನಾವರಣ

# ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| **I** | **ಹಿರಿಯ ನಾಗರಿಕರ ಗೌರವಯುತ ಹಾಗೂ ಆರೋಗ್ಯಕರ ಜೀವನಕ್ಕೆ ಪೂರಕವಾಗುವ ಉಪಯುಕ್ತ ಮಾಹಿತಿ** | |
| 1 | ಲೇಖನಗಳ ಪರಿಚಯ | 3 |
| 2 | ಜ್ಯೇಷ್ಠಶಕ್ತಿ–ಹಿರಿಯರ ಸಾಮರ್ಥ್ಯಗಳ ಕಿರು ಪರಿಚಯ | 4–6 |
| 3 | ಸುಲಲಿತ ಸಂಧ್ಯಾಜೀವನಕ್ಕೆ ಸಿದ್ಧತೆ | 7–8 |
| 4 | ವೃದ್ಧಾಪ್ಯ ಮತ್ತು ಆರೋಗ್ಯ | 9–14 |
| 5 | ವೃದ್ಧಾಪ್ಯದಲ್ಲಿ ಸಾಮಾಜಿಕ ಸಂಬಂಧಗಳು | 14–16 |
| 6 | ಸಾರ್ಥಕ ಜ್ಯೇಷ್ಠತೆ | 16–17 |
| 7 | ಜ್ಯೇಷ್ಠ ನಾಗರಿಕರಿಗಾಗಿ ಕೆಲಸ ಮಾಡುವವರಿಗೆ ಕೆಲವು ಸಲಹೆಗಳು | 17–18 |
| **II** | **ಕೇಂದ್ರ / ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು / ಸಂಸ್ಥೆಗಳು ಹಿರಿಯ ನಾಗರಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳು** | |
| 1 | ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಂದ ನೀಡಲಾಗುತ್ತಿರುವ ಸೌಲಭ್ಯಗಳು | 21–24 |
| 2 | ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ನೀಡಲಾಗುತ್ತಿರುವ ಸೌಲಭ್ಯಗಳು | 25–42 |
| 3 | ಹಿರಿಯ ನಾಗರಿಕರ ಗುರುತಿನ ಚೀಟಿ ವಿತರಿಸಲು ಇಲಾಖೆಯಿಂದ ಗುರುತಿಸಿದ ಸ್ವಯಂ ಸೇವಾ ಸಂಸ್ಥೆಗಳ ಪಟ್ಟಿ | 43–67 |
| 4 | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪಟ್ಟಿ | 68–70 |
| 5 | ವೃದ್ಧಾಶ್ರಮಗಳ ಪಟ್ಟಿ – ರಾಜ್ಯ / ಕೇಂದ್ರ ಅನುದಾನಿತ /ಅನುದಾನ ರಹಿತ | 71–102 |
| 6 | ಹಗಲು ಯೋಗಕ್ಷೇಮ ಕೇಂದ್ರಗಳ ಪಟ್ಟಿ – ರಾಜ್ಯ / ಕೇಂದ್ರ ಅನುದಾನಿತ | 103–104 |
| 7 | ಮಲ್ಟಿ ಫೆಸಿಲಿಟಿ ಕೇರ್ ಸೆಂಟರ್ ಫಾರ್ ಓಲ್ಡರ್ ವಿಡೋ ವುಮೆನ್ಸ್ ಪಟ್ಟಿ | 104 |
| 8 | ಮೊಬೈಲ್ ಮೆಡಿಕೇರ್ ಯೂನಿಟ್‌ಗಳ ಪಟ್ಟಿ | 105 |
| 9 | ಹಿರಿಯ ನಾಗರಿಕರ ಪಾಲನೆಗಾಗಿ ಶುಶ್ರೂಷಕರನ್ನು ಒದಗಿಸುವ ಸ್ವಯಂ ಸೇವಾ ಸಂಸ್ಥೆಗಳ ಪಟ್ಟಿ (ಸರ್ವೀಸ್ ಪ್ರವೈಡರ್ಸ್) | 105–107 |



ಸಿದ್ದರಾಮಯ್ಯ

ಮುಖ್ಯ ಮಂತ್ರಿಗಳು

ವಿಧಾನ ಸೌಧ

ಬೆಂಗಳೂರು - 560 001

ಸಿಎಂ/ಪಿಎಸ್/178/2013

ದಿನಾಂಕ 26-9-2013

**ಸಂದೇಶ**

ಆಕ್ಟೋಬರ್ 1 ರಂದು **ವಿಶ್ವ ಹಿರಿಯ ನಾಗರೀಕರ ದಿನಾಚರಣೆಯ** ಸಂದರ್ಭದಲ್ಲಿ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ **ಹಿರಿಯ ನಾಗರೀಕರಿಗೆ ಸಹಾಯ ಹಸ್ತ** ಎಂಬ ಕೈಪಿಡಿಯನ್ನು ಹೊರತರುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ಅವಿಭಕ್ತ ಕುಟುಂಬಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿವೆ. ಬಾಂಧವ್ಯದ ಬೆಸುಗೆಗಳು ನಶಿಸುತ್ತಿವೆ. ಸಂಬಂಧಗಳ ಬಂಧನಗಳು ಕಳಚಿ ಬೀಳುತ್ತಿವೆ. ಅಂತೆಯೇ, ಅಣು ಕುಟುಂಬಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಉಂಟಾಗುತ್ತಿದೆ. ಹಿರಿಯ ನಾಗರೀಕರು ಮೂಲೆ ಗುಂಪಾಗುತ್ತಿದ್ದಾರೆ. ಹಿರಿಯರು ಮತ್ತು ಕಿರಿಯರಲ್ಲಿ ಹೊಂದಾಣಿಕೆ ಇಲ್ಲದಿರುವುದೇ ಈ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ.

ತಮ್ಮ ಮಕ್ಕಳ ಬಗ್ಗೆ ದೂರುವ ಹಾಗೂ ತಮ್ಮ ಮಕ್ಕಳಿಂದಲೇ ದೂರವಾಗುವ ಹಿರಿಯ ನಾಗರೀಕರಿಗೆ ನೆರವು ಒದಗಿಸುವ ಜವಾಬ್ದಾರಿ ಸರ್ಕಾರದ್ದು ಮಾತ್ರವಲ್ಲ, ಸಮುದಾಯದ್ದು ಕೂಡಾ.

ಹಿರಿಯ ನಾಗರೀಕರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸಂಘ ಸಂಸ್ಥೆಗಳಿಂದ ದೊರೆಯುವ ಸೌಲಭ್ಯ ಮತ್ತು ಸವಲತ್ತುಗಳ ಮಾಹಿತಿಗಳನ್ನು ವಿಳಾಸ ಮತ್ತು ಸಂಪರ್ಕದ ಪೂರ್ಣ ವಿವರಗಳೊಂದಿಗೆ ಒದಗಿಸುವ ವಿಕಲ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಪ್ರಯತ್ನಕ್ಕೆ ಅಭಿನಂದಿಸುತ್ತಾ, ಈ ಕೈಪಿಡಿಯು ಎಲ್ಲಾ ಹಿರಿಯ ಚೇತನಗಳಿಗೆ ಬದುಕುವ ಚೈತನ್ಯ ನೀಡುವ ಆಶಾಜ್ಯೋತಿಯಾಗಲಿ ಎಂದು ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001.

ಉಮಾಶ್ರೀ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ವಿಧಾನಸೌಧ
ಬೆಂಗಳೂರು–1
ದಿನಾಂಕ: 16–09–2013



## ಸಂದೇಶ

ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2013ರ ಈ ಶುಭ ಸಂದರ್ಭದಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 'ಹಿರಿಯ ನಾಗರಿಕರಿಗೆ ಸಹಾಯ ಹಸ್ತ' ಎಂಬ ಕೈಪಿಡಿ ಪ್ರಕಟಿಸುತ್ತಿರುವುದು ಹರ್ಷತಂದಿದೆ. ಡಾ॥ ಇಂದಿರಾ ಜಯಪ್ರಕಾಶ್‌ರವರು ಬರೆದಿರುವ ಹಿರಿಯ ನಾಗರಿಕರಿಗೆ ಸಂಬಂಧಿಸಿದ ಮಾಹಿತಿಯ ಲೇಖನಗಳು ಹಾಗೂ ಕೇಂದ್ರ/ರಾಜ್ಯ ಸರ್ಕಾರ ವಿವಿಧ ಇಲಾಖೆಗಳ/ಸಂಸ್ಥೆಗಳ ಮೂಲಕ ಹಿರಿಯರಿಗಾಗಿ ನೀಡುತ್ತಿರುವ ಸೌಲಭ್ಯಗಳು ಮತ್ತು ಸೇವೆಗಳ ಮಾಹಿತಿಯನ್ನು ಒಳಗೊಂಡಿರುವ ಈ ಕಿರುಹೊತ್ತಿಗೆಯು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬರಿಗೂ ಮಾರ್ಗದರ್ಶಕವಾಗಲಿ ಎಂದು ಆಶಿಸುತ್ತಾ, ಕಿರಿಯರ ಹಾಗೂ ಹಿರಿಯರ ನಡುವಿನ ಸಂಬಂಧಗಳು ಸಾಮರಸ್ಯದಿಂದಿರಲಿ ಎಂದು ಈ ಶುಭ ಸಂದರ್ಭದಲ್ಲಿ ಹಾರೈಸುತ್ತೇನೆ.



ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಬೆಂಗಳೂರು–1

ದಿನಾಂಕ: 17–09–2013



## ಸಂದೇಶ

ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2013ರ ಅಂಗವಾಗಿ ಹಿರಿಯ ನಾಗರಿಕರಿಗೆ ಸರ್ಕಾರ ಹಾಗೂ ಇತರೆ ಮೂಲಗಳಿಂದ ಲಭಿಸುವ ರಿಯಾಯಿತಿ ಹಾಗೂ ಸೌಲಭ್ಯಗಳನ್ನೊಳಗೊಂಡ **'ಹಿರಿಯ ನಾಗರಿಕರಿಗೆ ಸಹಾಯ ಹಸ್ತ'** ಎಂಬ ಕೈಪಿಡಿಯನ್ನು ಬಿಡುಗಡೆಗೊಳಿಸುತ್ತಿರುವುದು ಸಂತೋಷದ ವಿಷಯವಾಗಿದೆ.

ಹಿರಿಯರು ಸ್ವಾಭಿಮಾನದಿಂದ ಸಕ್ರಿಯವಾಗಿ, ಆರೋಗ್ಯವಂತರಾಗಿ ಮತ್ತು ಗೌರವಯುತವಾಗಿ ಸಮಾಜದಲ್ಲಿ ಬದುಕಲು ಬೇಕಾದ ಮಾಹಿತಿ ಒಂದೇ ಕಡೆ ಕೈಪಿಡಿ ರೂಪದಲ್ಲಿ ದೊರೆಯುವಂತಾಗಿರುವುದು ಸ್ವಾಗತಾರ್ಹವಾಗಿದೆ.

ಈ ಶುಭ ಸಂದರ್ಭದಲ್ಲಿ ಹಿರಿಯ ನಾಗರಿಕರಲ್ಲಿನ ಜೀವಿತಾವಧಿಯ ಅಗಾದ ಅನುಭವ ಸಾರವನ್ನು ಯುವ ಜನಾಂಗವು ಮೈಗೂಡಿಸಿಕೊಂಡು, ತಮ್ಮ ಜೀವನವನ್ನು ಯಶಸ್ವಿಯಾಗಿ ಮುನ್ನಡೆಸುವಂತಾಗಲಿ ಎಂದು ಹಾರೈಸುತ್ತೇನೆ.

(ರಮೇಶ್ ಬಿ.ಝುಳಕಿ) ಐ.ಎ.ಎಸ್.

# ನಿರ್ದೇಶಕರ ನುಡಿ



ಆಧುನಿಕ ಯಾಂತ್ರಿಕತೆಯ ಬದುಕಿನ ಈ ದಿನಗಳಲ್ಲಿ ಕುಟುಂಬವೆನ್ನುವ ವ್ಯಾಖ್ಯಾನವೇ ಬದಲಾಗಿದೆ. "ವಸುದೈವ ಕುಟುಂಬಕಂ" ಎಂದು ಜಗತ್ತಿಗೆ ಸಾರಿ ಹೇಳಿದ ಈ ದೇಶದಲ್ಲಿ ಅವಿಭಕ್ತ ಕುಟುಂಬಗಳು ಮಾಯವಾಗಿ, ವಿಭಕ್ತ ಕುಟುಂಬಗಳಲ್ಲಿ ಜೀವಿಸುವ ಅನಿವಾರ್ಯತೆಯಲ್ಲಿ ಇಂದು ನಾವಿದ್ದೇವೆ. ಕಿರಿಯರ ಏಳಿಗೆಗಾಗಿ ಜೀವ ಸವೆಸಿದ ಪಾಲಕರು, ಕಿರಿಯರನ್ನು ಆಶ್ರಯಿಸಬೇಕಾದ ಸಂದರ್ಭಗಳಲ್ಲಿ ಅನೇಕ ಕಾರಣಗಳಿಂದ ಒಂಟಿತನ ಅನುಭವಿಸಬೇಕಾಗಿದೆ. ಅಲ್ಲದೆ, ವೈದ್ಯಕೀಯ ರಂಗದಲ್ಲಿನ ಕ್ರಾಂತಿಕಾರಕ ಬೆಳವಣಿಗೆಯಿಂದಾಗಿ ಮನುಷ್ಯನ ಜೀವಿತಾವಧಿಯು ಹೆಚ್ಚಾಗಿದೆ. ಜೀವನಶೈಲಿಯಲ್ಲಿನ ಬದಲಾವಣೆಯಿಂದಾಗಿ ತಲೆಮಾರುಗಳ ನಡುವಿನ ವ್ಯತ್ಯಾಸದ ಪರಿಣಾಮದಿಂದ ವಿಷಯಗಳ ಅಭಿವ್ಯಕ್ತತೆಯಲ್ಲಿ ವಿರೋಧಾಭಾಸಗಳು ಉಂಟಾಗಿ, ಕಿರಿಯರ ಹಾಗೂ ಹಿರಿಯರ ನಡುವಿನ ಬಾಂಧವ್ಯ ಶಿಥಿಲಗೊಂಡಿದೆ. ಇದರಿಂದ ಜೀವನದ ಸಂಧ್ಯಾಕಾಲದಲ್ಲಿರುವ ಹಿರಿಯ ನಾಗರಿಕರು ಒಂಟಿತನ, ಮಾನಸಿಕ ತುಮುಲ, ಆರ್ಥಿಕ ಮುಗ್ಗಟ್ಟು, ಅನಾರೋಗ್ಯ, ಮುಂತಾದ ಸಮಸ್ಯೆಗಳಲ್ಲಿ ಸಿಲುಕಿ ತೊಳಲಾಡುತ್ತಿದ್ದಾರೆ. ವಯೋವೃದ್ಧರ ಈ ಸಮಸ್ಯೆಗಳನ್ನು ಬಗೆಹರಿಸಿ, ಸಂಧ್ಯಾಕಾಲದಲ್ಲಿ ನೆಮ್ಮದಿಯ ಬದುಕು ಸಾಗಿಸಲು ಅನುವು ಮಾಡಿಕೊಡುವುದು ಇಂದಿನ ಸಮಾಜದ ಹಾಗೂ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಈ ದಿಸೆಯಲ್ಲಿ ಕೇಂದ್ರ ಸರ್ಕಾರವು "ಹಿರಿಯ ನಾಗರಿಕರ ರಾಷ್ಟ್ರ ನೀತಿ"ಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದು, ಅದರಂತೆ ಎಲ್ಲಾ ರಾಜ್ಯಗಳು ಹಿರಿಯ ನಾಗರಿಕರ ರಾಜ್ಯ ನೀತಿಯನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ. ಪ್ರಯುಕ್ತ ಕರ್ನಾಟಕ ರಾಜ್ಯದಲ್ಲಿಯೂ ಸಹ "ಹಿರಿಯ ನಾಗರಿಕರ ರಾಜ್ಯ ನೀತಿ"ಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಹಿರಿಯ ನಾಗರಿಕರ ರಾಷ್ಟ್ರನೀತಿಯ ಸಮರ್ಪಕ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು 2007ರಲ್ಲಿ ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿದ್ದು, ಕರ್ನಾಟಕ ರಾಜ್ಯದಲ್ಲಿಯೂ ಸಹ ಸದರಿ ಕಾಯ್ದೆಯನ್ನು ದಿನಾಂಕ:01–04–2008ರಿಂದ ಜಾರಿಗೊಳಿಸಲಾಗಿದೆ.

ಹಿರಿಯ ನಾಗರಿಕರ ರಾಷ್ಟ್ರ/ರಾಜ್ಯ ನೀತಿ ಹಾಗೂ ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007 ಹಾಗೂ ಅಧಿನಿಯಮ 2009ರಲ್ಲಿನ ಅವಕಾಶಗಳನ್ವಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು ಅನೇಕ ಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸುತ್ತಿದೆ. ಇವುಗಳಲ್ಲಿ ಹಿರಿಯ ನಾಗರಿಕರ ಗುರುತಿನ ಚೀಟಿ, ಹಿರಿಯ ನಾಗರಿಕರ ಸಹಾಯವಾಣಿ, ಹಗಲು ಯೋಗಕ್ಷೇಮ ಕೇಂದ್ರಗಳು, ವೃದ್ಧಾಶ್ರಮಗಳು, ಸಂಚಾರಿ ವೈದ್ಯಕೀಯ ಘಟಕಗಳು ಪ್ರಮುಖವಾಗಿವೆ.

ಬದಲಾದ ಜೀವನಶೈಲಿಯಲ್ಲಿ ಹಿರಿಯರು ತಮ್ಮ ಆರೋಗ್ಯದ ಬಗ್ಗೆ ವಹಿಸಬೇಕಾದ ಕಾಳಜಿ, ಸೇವಿಸಬೇಕಾದ ಆಹಾರ, ಮನಸ್ಥಿತಿಯ ಸಮತೋಲನ ಮುಂತಾದ ವಿಷಯಗಳ ಬಗ್ಗೆ

ಮಾಹಿತಿಯನ್ನೊಳಗೊಂಡ ಡಾ॥ ಇಂದಿರಾ ಜೈಪ್ರಕಾಶ್‌ರವರು ರಚಿಸಿರುವ ಲೇಖನಗಳು ಜೀವನದ ಸಂಧ್ಯಾಕಾಲಕ್ಕೆ ಹೆಜ್ಜೆಯಿಡುತ್ತಿರುವವರಿಗೆ ಉಪಯುಕ್ತ ಮಾಹಿತಿ ಭಂಡಾರವಾಗಿವೆ.

ಕೇಂದ್ರ / ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು, ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಹಿರಿಯ ನಾಗರಿಕರಿಗಾಗಿ ಒದಗಿಸುತ್ತಿರುವ ವಿವಿಧ ಸೌಲಭ್ಯಗಳೆಲ್ಲವನ್ನು ಒಂದೆಡೆ ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ಹೊರತರುವ ಪ್ರಯತ್ನವನ್ನು ಇಲಾಖೆಯ ವತಿಯಿಂದ ಮಾಡಲಾಗಿದ್ದು, ಈ ಪುಸ್ತಕವು ಸಾರ್ವಜನಿಕರಿಗೆ, ಹಿರಿಯ ನಾಗರಿಕರಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ವಿವಿಧ ಇಲಾಖೆಗಳ ಮುಖ್ಯಸ್ಥರು/ಅಧಿಕಾರಿಗಳಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ ಉಪಯುಕ್ತವಾಗಿ, ಕಿರಿಯರ ಮನಸ್ಸಿನಲ್ಲಿ ಹಿರಿಯರ ಪಾಲನೆ, ಪೋಷಣೆ ಹಾಗೂ ಸಂರಕ್ಷಣೆ ಬಗ್ಗೆ ಕಾಳಜಿ ಮೂಡಿಸಿ, ಜೀವನ ಸಂಧ್ಯಾಕಾಲದಲ್ಲಿನ ಹಿರಿಯ ನಾಗರಿಕರು ಸಂತೃಪ್ತಿ ಜೀವನ ನಡೆಸಲು ಹಾದಿ ಸುಗಮಗೊಳಿಸಿದಲ್ಲಿ ಇಲಾಖಾ ಶ್ರಮವು ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಈ ಪುಸ್ತಕವನ್ನು ನಿಗದಿತ ವೇಳೆಯಲ್ಲಿ ಬಿಡುಗಡೆಗೊಳಿಸಲು ಸಹಕರಿಸಿದ "ಹಿರಿಯ ನಾಗರಿಕರ ಗೌರವಯುತ ಹಾಗೂ ಆರೋಗ್ಯಕರ ಜೀವನಕ್ಕೆ ಪೂರಕವಾಗುವ ಉಪಯುಕ್ತ ಮಾಹಿತಿ" ಪುಸ್ತಕದ ಬರಹಗಾರ್ತಿಯವರಾದ ಡಾ॥ ಇಂದಿರಾ ಜೈಪ್ರಕಾಶ್‌ರವರಿಗೆ ಹಾಗೂ ಹಿರಿಯ ನಾಗರಿಕರಿಗೆ ಕೇಂದ್ರ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು/ಸಂಸ್ಥೆಗಳು ನೀಡುತ್ತಿರುವ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸಿದ ವಿವಿಧ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳಿಗೆ, ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಯೋಜನೆಗಳ ಅನುಷ್ಠಾನಾಧಿಕಾರಿಗಳಾದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳಿಗೆ, ಮಾಹಿತಿಗಳ ಕ್ರೋಢೀಕರಣದ ಜವಾಬ್ದಾರಿಯನ್ನು ನಿರ್ವಹಿಸಿದ ನಿರ್ದೇಶನಾಲಯದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಅಭಿನಂದನೆಗಳು.



(ಜಯವಿಭವ ಸ್ವಾಮಿ) ಕ.ಆ.ಸೇ,
ನಿರ್ದೇಶಕರು, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು